# ವಿಜಯ್, ಫಹಾದ್, ಕಮಲ್ ಮಹಾಸಂಗಮ

'ಮಹಾಪ್ರತಿಭೆಗಳ ಮಹಾಸಂಗಮ – ಹೀಗೊಂದು ಒಕ್ಕಣೆ ಸಾಮಾಜಿಕ ಜಾಲತಾಣದ ಓದುಗರ ಪ್ರತಿಕ್ರಿಯೆಗಳಲ್ಲಿ ಜುಲೈ 9ರಿಂದ ಹರಿದಾಡುತ್ತಿದೆ. 'ವಿಕ್ರಮ್' ತಮಿಳು ಸಿನಿಮಾದ ಅಧಿಕೃತ ಪೋಸ್ಟರ್ ಅನ್ನು ಕಮಲ ಹಾಸನ್ ಹಂಚಿಕೊಂಡಿದ್ದೇ ಅದು ಜಾಲತಾಣದ ಮನರಂಜನಾ ಸುದ್ದಿಗಳಲ್ಲೇ ಟ್ರೆಂಡ್ ಆಯಿತು. ಪೊಗದಸ್ತು ಗಡ್ಡದ ವಿಜಯ್ ಸೇತುಪತಿ, ಫಹಾದ್ ಫಾಸಿಲ್ ಅತ್ತ–ಇತ್ತ. ಅವರಿಬ್ಬರ ಮಧ್ಯೆ ಅಂಥದ್ದೇ ಗಡ್ಡದ ಕಮಲ ಹಾಸನ್. ಮೂವರ ಮುಖದ ಮೇಲೆ ಅಲ್ಲಲ್ಲಿ ಕುರ್ಪುಗಳು. ಕಪ್ಪು–ಬಿಳುಪು ಪೋಸ್ಟರ್‌ನಲ್ಲಿ ರಕ್ತದ ಕಲೆಗಳಷ್ಟೆ ಕೆಂಪು. ಈ ಪೋಸ್ಟರ್‌ನ ಇಂತಹ ಸಣ್ಣಪುಟ್ಟ ವಿವರಗಳನ್ನೆಲ್ಲ ಅಭಿಮಾನಿಗಳು ಖುಷಿಯಿಂದ ಬಣ್ಣಿಸತೊಡಗಿದ್ದಾರೆ.



ಲೋಕೇಶ್ ಕನಕರಾಜ್ ನಿರ್ದೇಶನದ 'ವಿಕ್ರಮ್'ನ ಒಂದು ಸಣ್ಣ ಟೀಸರ್ ಕೆಲವು ತಿಂಗಳುಗಳ ಹಿಂದೆ ಸಂಚಲನ ಮೂಡಿಸಿತ್ತು. ಮಾಂಸಾಹಾರಕ್ಕೆ ಬಾಳೆಎಲೆಗಳನ್ನು ಹಾಕಿ ಅಣಿಮಾಡಿದ ದೊಡ್ಡ ಮೇಜಿನ ನಡುಭಾಗದ ಕುರ್ಚಿಯಲ್ಲಿ ಕುಳಿತ ಕಮಲ್, ಮೇಜಿನ ಕೆಳಗೆ ಬಂದೂಕು ಹಿಡಿದಿದ್ದ ದೃಶ್ಯ ಅದರಲ್ಲಿತ್ತು. ಯಾರನ್ನು ಔತಣಕ್ಕೆ ಕರೆದು ಅವರು 'ಮುಹೂರ್ತ' ಇಡುವರೋ ಎಂಬ ಕುತೂಹಲವನ್ನು ಉಳಿಸಿದಂಥ ಟೀಸರ್ ಅದು.

'Only valour should wear the crown' ಎಂಬ ಒಕ್ಕಣೆಯನ್ನು ಕಮಲ್ ಟ್ವಿಟ್ಟರ್‌ನಲ್ಲಿ ಬರೆದು, ಪೋಸ್ಟರ್‌ನ ಜತೆ ಶೇರ್ ಮಾಡಿದ್ದರು. 'ವೀರಾಗ್ರಣಿಯ ಶಿರವನ್ನಷ್ಟೇ ಕಿರೀಟ ಅಲಂಕರಿಸಬೇಕು' ಎಂಬ ಅರ್ಥದ ಈ ಒಕ್ಕಣೆ ಸಿನಿಮಾದ ಒನ್‌ಲೈನರ್ ಹೇಗಿದ್ದೀತು ಎನ್ನುವುದರ ಸುಳಿವನ್ನು ನೀಡಿದೆಯಷ್ಟೆ. ಕಮಲ್ ಅವರದ್ದೇ ಆದ 'ರಾಜ್ ಕಮಲ್ ಫಿಲ್ಮ್ ಇಂಟರ್‌ನ್ಯಾಷನಲ್' ಸಂಸ್ಥೆ ಈ ಚಿತ್ರವನ್ನು ನಿರ್ಮಿಸುತ್ತಿದೆ. 1988ರ 'ಸತ್ಯ' ಹಾಗೂ 2004ರ 'ವಿರುಮಾಂಡಿ' ತಮಿಳು ಚಿತ್ರಗಳಲ್ಲಿ ಕಮಲ್ ಹಾಸನ್ ಅವರ ಅಭಿನಯವನ್ನು ನೋಡಿ, ಪ್ರೇರೇಪಣೆ ಪಡೆದುಕೊಂಡೇ ತಾವು ನಿರ್ದೇಶಕರಾದದ್ದಾಗಿ ಹಿಂದೊಮ್ಮೆ ಲೋಕೇಶ್ ಕನಕರಾಜ್ ಹೇಳಿಕೊಂಡಿದ್ದರು. 2019ರಲ್ಲಿ ಅವರಿಂದಲೇ ತಮ್ಮ ಚಿತ್ರ ನಿರ್ದೇಶಿಸಬೇಕೆಂಬ ನಿರ್ಧಾರವನ್ನು ಕಮಲ್ ಕೈಗೊಂಡದ್ದು ವಿಶೇಷ.

'ಮಾಸ್ಟರ್' ತಮಿಳು ಚಿತ್ರದ ಚಿತ್ರಕಥೆಯಲ್ಲಿ ಲೋಕೇಶ್ ಅವರ ಜತೆಗಿದ್ದ ರತ್ನಕುಮಾರ್ ಕೂಡ 'ವಿಕ್ರಮ್'ನ ಸ್ಕ್ರೀನ್‌ಪ್ಲೇಗೆ ಕಾಣಿಕೆ ಸಲ್ಲಿಸಿದ್ದಾರೆ. ಅನಿರುದ್ಧ್ ರವಿಚಂದರ್ ಸ್ವರ ಸಂಯೋಜನೆಯ ಹಾಡುಗಳು ಸಿನಿಮಾದಲ್ಲಿ ಇರಲಿವೆ.

ಕಮಲ್, ವಿಜಯ್ ಸೇತುಪತಿ, ಫಹಾದ್ ಮೂವರೂ ಏಕಕಾಲದಲ್ಲಿ ತೆರೆಮೇಲೆ ಹೇಗೆ ಕಾಣಬಹುದು ಎಂದು ಅಭಿಮಾನಿಗಳು ಈಗಲೇ ಬಾಯಿ ಚಪ್ಪರಿಸದೇ ಇರಲು ಹೇಗೆತಾನೆ ಸಾಧ್ಯ?

# ದಿಲೀಪ್ ಕೊಡುಗೆ, ನಾಸಿರುದ್ದೀನ್ ಟಿಪ್ಪಣಿ



ದಿಲೀಪ್ ಕುಮಾರ್



ನಾಸಿರುದ್ದೀನ್ ಶಾ

ಸಾಮಾನ್ಯವಾಗಿ ದೊಡ್ಡವರು ನಿಧನರಾದಾಗ ಒಳ್ಳೆಯ ಮಾತುಗಳನ್ನಷ್ಟೆ ಆಡಬೇಕು ಎನ್ನುವುದು ಸಹಜ ನಂಬುಗೆ. ಆದರೆ, ನಾಸಿರುದ್ದೀನ್ ಶಾ ಅವರಿಗೆ ಇಂಥ 'ಪೊಲಿಟಿಕಲ್ ಕರೆಕ್ಟ್‌ನೆಸ್' ಅಪಥ್ಯ. ಜುಲೈ 7ರಂದು ನಮ್ಮನ್ನೆಲ್ಲ ಅಗಲಿದ ಹಿರಿಯ ನಟ ದಿಲೀಪ್ ಕುಮಾರ್ ಅವರನ್ನು ಕುರಿತೂ ಅವರದ್ದು ವಿಶ್ಲೇಷಣಾತ್ಮಕ ಮಾತು.

'ದಿಲೀಪ್ ನಟನಾಗಿ ತಮ್ಮ ಬದುಕು ರೂಪಿಸಿಕೊಂಡರು. ಅದನ್ನು ಮೀರಿ ಅವರು ಬೇರೆ ಯಾವ ಕೊಡುಗೆಯನ್ನೂ ಚಿತ್ರರಂಗಕ್ಕೆ ನೀಡುವ ಮನಸ್ಸು ಮಾಡಲಿಲ್ಲ. ಒಂದೇ ಒಂದು ಸಿನಿಮಾ ನಿರ್ಮಿಸಿದರಷ್ಟೆ. ನಿರ್ದೇಶನಕ್ಕೆ ಹೊರಳುವ ಮನಸ್ಸು ಕೂಡ ಮಾಡಲಿಲ್ಲ. 1970ಕ್ಕೂ ಮುಂಚಿನ ಗತವೈಭವದಲ್ಲೇ ಅವರು ಹೆಚ್ಚು ಕಾಲ ಬದುಕಿದರು. ಅವರ ಆತ್ಮಕಥೆಯಲ್ಲಿರುವುದು ಅವರದ್ದೇ ಹಳೆಯ ಸಂದರ್ಶನಗಳ ಅದೇ ಹೂರಣ. ಇಂತಹ ನಟ ಮುಂದಿನ ತಲೆಮಾರಿಗೆ ಏನನ್ನಾದರೂ ಕ್ರಿಯಾಶೀಲತೆಯ ದೃಷ್ಟಿಯಿಂದ ದಾಟಿಸಬೇಕಾಗುತ್ತದೆ. ಅವರು ಅಂತಹ ಏನನ್ನೂ ಮಾಡಲೇ ಇಲ್ಲ.'

'ನಟನಾಗಿ ತಮ್ಮತನವನ್ನು ರೂಢಿಸಿಕೊಂಡಿದ್ದ ಅವರು, ಅಂತಹ ಸೂಕ್ಷ್ಮ ಮನಃಸ್ಥಿತಿಯನ್ನು ಇನ್ನಷ್ಟು ನಟರಲ್ಲಿ ರೂಪಿಸುವ ಕೆಲಸವನ್ನಾದರೂ ಮಾಡಬಹುದಿತ್ತು. ಸಾಮಾಜಿಕವಾಗಿ ಹೆಚ್ಚೇನನ್ನೂ ಮಾಡದೇ ಅವರು ಯಾಕೋ ತಮ್ಮದೇ ಗೂಡಿನಲ್ಲಿ ಇದ್ದುಬಿಟ್ಟಿದ್ದರು' ಎಂದು ನಾಸಿರುದ್ದೀನ್ ನಿರ್ಭಿಡೆಯಿಂದ ಮಾಧ್ಯಮವೊಂದಕ್ಕೆ ಪ್ರತಿಕ್ರಿಯಿಸಿದ್ದಾರೆ.